1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

ಸಿ.ಸಿ.ಸಂಖ್ಯೆಃ 1351 ಃ 2015

ಪಿರ್ಯಾದಿ ಃ ಬದನವಾಳು ಪೊಲೀಸರು

ವಿರುದ್ಧ

ಆರೋಪಿಗಳು ಃ
1. ರಂಗಸ್ವಾಮಿನಾಯ್ಕ ಬಿನ್ ಹಲ್ಲಪ್ಪನಾಯ್ಕ , 50 ವರ್ಷ
2. ಅನಿಲ್ ಉಃ ಅನಿಲ್ ಕುಮಾರ್ ಬಿನ್ ರಂಗಸ್ವಾಮಿನಾಯ್ಕ , 28 ವರ್ಷ
3. ಗೌರಮ್ಮ ಕೊಂ ರಂಗಸ್ವಾಮಿನಾಯ್ಕ 40 ವರ್ಷ
4. ಹಲ್ಲಪ್ಪನಾಯ್ಕ ಬಿನ್ ಪಿಲ್ಲನಾಯ್ಕ , 70 ವರ್ಷ

ಎಲ್ಲರೂ ವಾಸಃ ಹೆಡತಲೆ ಗ್ರಾಮ , ನಂಜನಗೂಡು

## ದೋಷಾರೋಪಣೆ

ಸಂದೀಪ್ ಎ. ನಾಯಿಕ್, 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ನಾವು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ-

ದಿಃ 25.3.2014 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಬದನವಾಳು ಪೋಲಿಸ್ ಠಾಣಾ ವ್ಯಾಪ್ತಿಗೆ ಸೇರಿದ ಹೆಡತಲೆ ಗ್ರಾಮದ ಸಾಕ್ಷಿ 1ರವರ ವಾಸದ ಮನೆ ಮುಂಭಾಗ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಅವಮಾನವನ್ನುಂಟು ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 504 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ ಇದೆ.

ಎರಡನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ , 1 ಮತ್ತು 2ನೇ ಆರೋಪಿಗಳು ಸಾಕ್ಷಿ 2ರವರನ್ನು ಹಿಡಿದು ಎಳೆದಾಡಿ ಅಕ್ರಮ ತಡೆಯುಂಟು ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 341 ಸಹವಾಚಕ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ ಇದೆ.

ಮೂರನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ , 1 ಮತ್ತು 2ನೇ ಆರೋಪಿಗಳು ಸಾಕ್ಷಿ 2ರವರನ್ನು ಕೆಳಕ್ಕೆ ಕೆಡವಿ , ಕಾಲಿನಿಂದ ಹೊಟ್ಟೆಗೆ ಒದ್ದು ,

ಕೈಗಳಿಂದ ಮುಖಕ್ಕೆ ಹೊಡೆದು , ಸಾಕ್ಷಿ 3ರವರ ಹೊಟ್ಟೆಗೆ ಕಾಲಿನಿಂದ ಒದ್ದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 323 ಸಹವಾಚಕ 34ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ ಇದೆ.

ನಾಲ್ಕನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ , 1ನೇ ಆರೋಪಿ ಸಾಕ್ಷಿ 2ರವರನ್ನು ಮಾನಭಂಗ ಮಾಡಲು ಪ್ರಯತ್ನಿಸಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 354 ಸಹವಾಚಕ 34ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ ಇದೆ.

ಐದನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ , 1 ಮತ್ತು 2ನೇ ಆರೋಪಿಗಳು ಮಚ್ಚಿನಿಂದ ಸಾಕ್ಷಿ 4ರವರ ತಲೆಯ ಹಿಂಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗಾಯನ್ನುಂಟು ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 324 ಸಹವಾಚಕ 34ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ ಇದೆ.

ಆರನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ , 1 ಮತ್ತು 2ನೇ ಆರೋಪಿಗಳು ಸಾಕ್ಷಿ 3ರವರಿಗೆ ಕೊಲೆ ಬೆದರಿಕೆ ಹಾಕಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 506 ಸಹವಾಚಕ 34ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ ಇದೆ.

ಮೇಲ್ಕಂಡ ಆಪಾದನೆಗೆ ಆರೋಪಿಗಳಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

ಸಹಿ/-

ದಿನಾಂಕಃ 3.5.2017 — 1ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.

ಸ್ಥಳ ಃ ನಂಜನಗೂಡು — ನಂಜನಗೂಡು